ಸಾವಿರ ಸಾವಿರ ಪೊಟ್ಟಣಗಳನ್ನೂ, ಅವುಗಳನ್ನು ಸೂಕ್ತವಾಗಿ ಉಪಯೋಗಿಸುವ ಕ್ರಮವನ್ನು ಪ್ರಾತ್ಯಕ್ಷಿಕೆಯ ಮೂಲಕ ತೋರಿಸಲು ಬಿದಿರಿನ ಚಿಕ್ಕ ಚಿಕ್ಕ ಗೂಟಗಳನ್ನೂ ಹೊಂದಿಸಿಕೊಂಡು ಆ ಪ್ರದೇಶದ ಬೇರೆ ಬೇರೆ ಭಾಗಗಳಲ್ಲಿ ಕಾರ್ಯಪ್ರವೃತ್ತರಾದರು. ಈ ಕೆಲಸ ನಿರಂತರವಾಗಿ ನಡೆಯಿತು ಕೂಡ.

ಎರಡು ವರ್ಷ ಕಳೆದವು. ಜನಸಂಖ್ಯಾ ನಿಯಂತ್ರಣಕ್ಕೆ ನಿಯುಕ್ತರಾಗಿದ್ದ ಕಾರ್ಯಕರ್ತರು ತಮ್ಮ ಪ್ರಯತ್ನ ಸಫಲವಾಯಿತೆಂಬ ಹುಮ್ಮಸ್ಸಿನಲ್ಲಿದ್ದರು. ಇಲಾಖೆ ಕೂಡ ಬಹುದಿನಗಳಿಂದ ಸಾಧಿಸಲಾಗದ್ದನ್ನು ಸಾಧಿಸಿದ ಉತ್ಸಾಹದಲ್ಲಿತ್ತು. ಅವರ ಈ ಉತ್ಸಾಹದ ಹುಮ್ಮಸ್ಸಿಗೆ ಅಧಿಕೃತ ಸಮೀಕ್ಷೆಯ ಠಸ್ಸೆಯೊಂದು ಬೀಳಬೇಕಾಗಿತ್ತಷ್ಟೆ.

ಅದೇ ವೇಗದಲ್ಲಿ ಜನಸಂಖ್ಯಾ ಸಮೀಕ್ಷೆ ಕೂಡಾ ನಡೆಯಿತು. ಆದರೆ ಪರಿಣಾಮ ನೋಡುತ್ತಾರೆ! ಕಡಿಮೆಯಾಗುವ ಮಾತಿರಲಿ, ನಿಯಂತ್ರಣಕ್ಕೆ ಬರುವ ವಿಷಯವೂ ಹಾಗಿರಲಿ; ಮೊದಲಿನ ವೇಗಕ್ಕಿಂತಲೂ ಜನಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿ ಮೇಲಕ್ಕೆ ಏರಿತ್ತು!

ಎಲ್ಲರಿಗೂ ಆಶ್ಚರ್ಯ. ಕಾರ್ಯಕರ್ತರಿಗೆ ಭಯ. ಸರಕಾರಕ್ಕೆ ಏನು ವರದಿ ಕೊಡಬೇಕೆನ್ನುವ ಚಿಂತೆ ಇಲಾಖೆಯವರಿಗೆ. ಇದು ಏನಾದರೂ ಇರಲಿ, ಯಾಕೆ ಹೀಗಾಯ್ತು? ಕಾರಣವೇನು? ಎಲ್ಲಿ ಎಡವಟ್ಟಾಯಿತು?ಈ ಪ್ರಶ್ನೆಗಳಿಗಾದರೂ ಉತ್ತರ ಕಂಡುಕೊಳ್ಳಲೇಬೇಕಲ್ಲವೆ? ಸುರುವಾಯಿತು ಮತ್ತೆ ಮರುಸಮೀಕ್ಷೆ!

ನಾಲ್ಕಾರು ದಿನ, ಹತ್ತಾರು ತಂಡಗಳು, ಇಪ್ಪತ್ತು ಮೂವತ್ತು ಕಡೆಗಳಲ್ಲಿ ತಿರುಗಿ, ತಿರುಗಿ ನೂರಾರು ಗಂಡಸರನ್ನ ವಿಚಾರಣೆಗೊಳಪಡಿಸಿದಾಗ, ಅವರಿಂದ ಬಂದ ಉತ್ತರ "...ಮತ್ತೆ ನೀವೇ ಬಿದ್ರಿನ ಗೂಟಕ್ಕೆ ನಿರೋಧ್ ಸಿಗಿಸಿ ತೋರ್ಸಿರ್ಲಿಲ್ಲಾ ಸ್ವಾಮಿ, ಹಿಂಗಿಂಗೆ ಅಂತ. ನಾವೂ ಹಂಗೇ ಮಾಡೇವಿ! ನಮ್ಮ ಹೆಂಡ್ರನ್ನ ಕೂಡೂವಾಗ ದಿನಾನೂ ತಪ್ದೇ ಈ ಬಿದ್ರಿಗೆ ನಿರೋಧ್ ಹಾಕಿ, ಮಗ್ಗಲ್ಕ ಇಟಗೊಂಡೇ ಮಲಕೊಂಡೇವಿ. ಅಷ್ಟೇ ಅಲ್ಲಾ ಸ್ವಾಮೀ, ನೀವು ಹೇಳ್ದಂಗೆ ನಡ್ನಡುವೆ ಎದ್ದು ಮೊದ್ಲ ಹಾಕಿದ್ ನಿರೋಧ ತಗದು ಒಗದು, ತಪ್ದನs ಮತ್ತ ಹೊಸಾದು ಬ್ಯಾರೇದ್ದನ್ನ ಸಿಗಿಸಿ ಇಟ್ಟs ಕೂಡೇವಿ. ಆದ್ರೂ ಮಕ್ಳು ಹುಟ್ಟ್ಯಾವು ನೋಡ್ರಿ! ಒಂದಲ್ಲ, ವರ್ಷಕ್ಕೊಂದ್ರಂಗ ಎರ್ಡೆರ್ಡು ಹುಟ್ಟ್ಯಾವ. ಇದರಾಗ ನಮ್ದೇನೂ ತಪ್ಪಿಲ್ಲ ಬಿಡ್ರಿ!!

ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮುಂದೇನು ಮಾಡಬೇಕೆಂಬುದು ತಿಳಿಯಲಾರದೆ, ಬಿದಿರಿನ ಎಲ್ಲ ಗೂಟಗಳನ್ನು ಸಂಗ್ರಹಿಸಿ ಚೀಲಗಳಲ್ಲಿ ತುಂಬತೊಡಗಿದರು!!

## ಬಸವರಾಜ ಸಾದರ

ಕವಿ, ವಿಮರ್ಶಕರೂ ಆಗಿರುವ ಕತೆಗಾರರು ಆಕಾಶವಾಣಿಯಲ್ಲಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರು. 'ತಪ್ದಂಡ' (ಕಥಾಸಂಕಲನ), 'ಸಿಸಿಫಸ್‌ರ ಸುತ್ತು', 'ಬುದ್ಧನ ಭಿಕ್ಷಾಪಾತ್ರೆ' (ಕವನ ಸಂಕಲನಗಳು), 'ಅನುಮಿತಿ' (ವಿಮರ್ಶೆ), 'ಮೃದುವಾಗಿ ಮುಟ್ಟು', 'ತಮಂಧಕ್ಕೆ ಬೆಳಗು', 'ಹೊಸ ಆಲೋಚನೆ' (ವೈಚಾರಿಕ ಪ್ರಬಂಧಗಳ ಸಂಗ್ರಹಗಳು) – ಅವರ ಕೃತಿಗಳು. 'ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು' ಅವರ ಪಿಎಚ್. ಡಿ. ಪ್ರಬಂಧವಾಗಿದೆ.